# ಆಹಾ ಸುದ್ದಿ!

★ ಸಸಿತೋಟ

ಈತ ಇಟಲಿಯ ಸಬ್ಬ. ಅಂಡರ್‌ವೇರ್ ಧರಿಸುವುದೆಂದರೆ ಈತನಿಗೆ ಹಬ್ಬದಲ್ಲಿ ಹೊಸ ಬಟ್ಟೆ ಧರಿಸಿದಷ್ಟು ಖುಷಿಯಂತೆ. 30 ಸೆಂಕೆಂಡ್‌ನಲ್ಲಿ 13 ಅಂಡರ್‌ವೇರ್ ಧರಿಸಿ ಗಿನ್ನೆಸ್ ಪ್ರವೇಶಿಸಿದ್ದಾನೆ. ಎಲ್ಲವನ್ನೂ ಟೇಬಲ್ ಮೇಲೆ ಜೋಡಿಸಿ ಕರಾರುವಾಕ್ಕಾಗಿ ಕಾಲಿನ ರಂಧ್ರವಿದ್ದಲ್ಲೇ ಜಿಗಿದು ಅಂಡರ್‌ವೇರ್ ಅನ್ನು ಸೊಂಟದ ಮೇಲೆ ಎಳೆದುಕೊಳ್ಳುತ್ತಾನಂತೆ. ಈತ ಜಿಗಿಯುವ ರೀತಿ ನೋಡಿದರೆ ಉಳಿದವರಿಗೆ ನಡುಕ ಬಂದು ಧರಿಸಿದ ಅಂಡರ್‌ವೇರ್ ಕಳಚಿ ಬೀಳಬಹುದು.




ಈ ತುಂಡುಬಟ್ಟೆಯ ನೆನಪು ತಾತಂದರಿಗೆ ತಮ್ಮ ಬಾಲ್ಯವನ್ನು ನೆನಪಿಸಿರಬಹುದು. ಎಲ್ಲಾ ಗತಕಾಲ ಎಂದುಕೊಂಡರೆ ಟೋಕಿಯೋದಲ್ಲಿ ಅದು ನಿತ್ಯನೂತನವಂತೆ. ಈ ಯುವಕರೆಲ್ಲ ಶಿಸ್ತಾಗಿ ಬಂದಿದ್ದು ಬೀದಿಯಲ್ಲಿ ಬಿದ್ದಿದ್ದ ಕಸ ಆಯಲು. ಬೀದಿ ಸ್ವಚ್ಛಗೊಳಿಸುವ ಮುನ್ನ ದೇಹವನ್ನೂ ಸ್ವಚ್ಛವಾಗಿಟ್ಟುಕೊಂಡಿದ್ದೇವೆ ಎಂದು ಈ ರೀತಿ ತೋರಿಸಬಾರದಿತ್ತು.



ಆಂಧ್ರದ ಗುಂಟೂರಿನ ನರ್ಸ್ ವಿನಯಕುಮಾರಿ ಬಾಹುಬಲಿ –2 ಸಿನಿಮಾ ವೀಕ್ಷಿಸುತ್ತಲೇ ಆಸ್ಪತ್ರೆಯಲ್ಲಿ ಮೆದುಳಿನ ಗಡ್ಡೆಯೊಂದಕ್ಕೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾಳಂತೆ. ಆದರೆ ಸಿನಿಮಾ ಮುಗಿಯುವ ಮುನ್ನವೇ ಶಸ್ತ್ರಚಿಕಿತ್ಸೆ ಮುಗಿಯಿತಂತೆ. ಚಲನಚಿತ್ರ ವೀಕ್ಷಿಸುವಾಗ ಪಾಪ್‌ಕಾರ್ನ್, ಚಿಪ್ಸ್ ತಿನ್ನುವುದು, ಮೊಬೈಲ್ ಚಿವುಟುವುದು ಬಿಟ್ಟರೆ ಮತ್ಯಾವ ಕೆಲಸ ಮಾಡಲು ಸಾಧ್ಯ ಎಂದು ಮೆದುಳಿಗೆ ಕೈ ಹಾಕುವವರಿಗೆ ಈ ಮೆದುಳು ಚಿಕಿತ್ಸೆ ಪಾಠವಾಗಬಹುದು.

ಅಮೆರಿಕದ ರ್‍ಯಾಪ್ ಸಿಂಗರ್ ಬಿ.ಒ.ಬಿ. ಭೂಮಿ ಚಪ್ಪಟೆಯಾಗಿದೆ ಎಂದು ವಾದಿಸಿದ್ದು ಗೊತ್ತೇ ಇದೆ. ಈಗ ಒಂದು ಹೆಜ್ಜೆ ಮುಂದೆ ಹೋಗಿ ತನ್ನ ವಾದವನ್ನು ಭೂಗ್ರಹ ಜೀವಿಗಳ ಎದುರು ಸಾಬೀತುಪಡಿಸಲು ಉಪಗ್ರಹ ಖರೀದಿಸಿ ಹಾರಿ ಬಿಡುತ್ತಾನಂತೆ. ಇದಕ್ಕಾಗಿ 10 ಲಕ್ಷ ಡಾಲರ್ ಹಣ ಸಂಗ್ರಹಿಸಲು ಕಸರತ್ತು ನಡೆಸಿದ್ದಾನಂತೆ. ಆದರೆ ಇದುವರೆಗೆ ಕೇವಲ 2000 ಡಾಲರ್ ಸಂಗ್ರಹವಾಗಿದ್ದು, ಆತನ ಯೋಜನೆಯಂತೂ ಸದ್ಯಕ್ಕೆ ಚಪ್ಪಟೆಯಾಗಿದೆ.



ಒಂದು ಪ್ಯಾಕೆಟ್‌ಗೆ 150 ರೂಪಾಯಿ (15 ಯುವಾನ್). ಚೀನಾದಲ್ಲಿ ಹಾಟ್‌ಕೇಕ್‌ನಂತೆ ಖರ್ಚಾಗುತ್ತಿದೆಯಂತೆ. ಅಷ್ಟಕ್ಕೂ ಇದರೊಳಗಿರುವುದು ಅಮೂಲ್ಯವಾದದ್ದೇ. ಜೀವ ಉಳಿಸುವ ಗಾಳಿ. ಚೀನಾದಲ್ಲಿ ವಾಯು ಮಾಲಿನ್ಯ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಇಬ್ಬರು ಸಹೋದರಿಯರು ಟಿಬೆಟ್ ಬೆಟ್ಟದಿಂದ ಶುದ್ಧ ಗಾಳಿಯನ್ನು ಹಿಡಿದು ತಂದಿದ್ದೇವೆ ಎಂದು ಆನ್‌ಲೈನ್‌ನಲ್ಲಿ ಮಾರಾಟ ಮಾಡುತ್ತಿದ್ದಾರಂತೆ. ಮಣ್ಣು, ನೀರು, ಗಾಳಿ.. ಎಲ್ಲವೂ ಮಾರಾಟಕ್ಕೆ ಬಂದವು, ಇನ್ನಾವುದು ಬಾಕಿ ಉಳಿದಿದೆಯೋ!



ಪ್ಯಾರಿಸ್‌ನಲ್ಲಿ ಆಗಾಗ 'ಕಾರ್‌ಫ್ರೀ' ದಿನಾಚರಣೆಗೆ ಸರ್ಕಾರ ಫರ್ಮಾನು ಹೊರಡಿಸುತ್ತದೆ. ಜನರಿಗೂ ಅದೇನೋ ಸಂಭ್ರಮ, ಸೈಕಲ್‌ನಲ್ಲಿ ಬಂದರು, ಜಟಕಾ ಗಾಡಿಯಲ್ಲಿ ಬಂದರು. ಆದರೂ ಒಬ್ಬಾಕೆ ಕಾರ್ ಬಿಡಲೊಲ್ಲೆ ಎಂದು ರೊಟ್ಟಿನ ಕಾರು ತಯಾರಿಸಿಕೊಂಡು ಕೇರ್‌ಫ್ರೀಯಾಗಿ ಬಂದಳಂತೆ.